# ಹೊಸದುರ್ಗದ ಪ್ರಧಾನ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ

**ಸಿ.ಸಿ.ನಂ. 323/2016**

| ಪಿರ್ಯಾದುದಾರರು:- | ವಿರುದ್ಧ | ಆರೋಪಿತರು |
|---|---|---|
| ಹೊಸದುರ್ಗ ಪೋಲೀಸ್ | | ಶರಣ್ ಮತ್ತು ಇತರರು |

## ದೋಷಾರೋಪಣೆ

ಶ್ರೀ ಪ್ರಶಾಂತ್ ನಾಗಲಾಪುರ, ಪ್ರಧಾನ ಸಿವಿಲ್ ಮತ್ತು ನ್ಯಾಯಿಕ ದಂಡಾಧಿಕಾರಿಗಳು, ಹೊಸದುರ್ಗ ಆದ ನಾನು ನಿಮ್ಮ ಮೇಲೆ ಅಂದರೆ,

1. ಶರಣ್ ತಂದೆ ಬ್ರಹ್ಮಸ್ವರೂಪ್,
   ಸುಮಾರು 20 ವರ್ಷ,
   ಬೆನಕನಹಳ್ಳಿ ಗ್ರಾಮ,
   ಹೊಸದುರ್ಗ ತಾಲ್ಲೂಕು,
   ಚಿತ್ರದುರ್ಗ ಜಿಲ್ಲೆ

2. ನಾಗೇಶ್ ತಂದೆ ಬೀರಪ್ಪ,
   ಸುಮಾರು 19 ವರ್ಷ,
   # 400, ಅಂಧ್ರಹಳ್ಳಿ ಮುಖ್ಯ ರಸ್ತೆ,
   ಬೆಂಗಳೂರು ನಗರ,

3. ಅನಿಲ್ ತಂದೆ ಮಂಜುನಾಥ,
   ಸುಮಾರು 20 ವರ್ಷ,
   ವಾಸಃ # 61, ಕಾಳಿಂಗನಗರ,
   ಅಂದ್ರಹಳ್ಳಿ, ಬೆಂಗಳೂರು ನಗರ,

4. ವಿಕಾಸ್ ಎಸ್.ಡಿ. ತಂದೆ ದಿನೇಶ್,
   ಸುಮಾರು 21 ವರ್ಷ,
   ಎಸ್.ಎಲ್.ಎನ್, ಶಾಲೆ ಹತ್ತಿರ,
   ತಿಗಳರಪಾಳ್ಯ, ಬೆಂಗಳೂರು ಸೌತ್,
   ಬೆಂಗಳೂರು ನಗರ.

**ನಿಮ್ಮ ಮೇಲೆ ಇರುವ ದೋಷಾರೋಪಣೆ ಇಂತಿದೆ.**

ಮೊದಲನೆಯದಾಗಿ, ದಿನಾಂಕಃ 11/12/2015 ರಂದು ಹೊಸದುರ್ಗ ತಾಲ್ಲೂಕು ಮಾಡದಕೆರೆ ಹೋಬಳಿ ಬೆನಕನಹಳ್ಳಿ ಗ್ರಾಮದ ಚಾಸಾ-1 ಪಂಕಜ ರವರ ಮನೆಯಲ್ಲಿ 1 ನೇ ಆರೋಪಿಯಾದ ನೀವು ಕಳ್ಳತನ ಮಾಡುವ ಉದ್ದೇಶದಿಂದ 2 ರಿಂದ 4 ನೇ ಆರೋಪಿತರನ್ನು ಕರೆಸಿಕೊಂಡು ಸಂಜೆ 5.00 ಗಂಟೆ ಸಮಯದಲ್ಲಿ ಚಾಸಾ-1 ರವರು ಸ್ನಾನ ಮಾಡಲು ಹೋಗಿದ್ದ ಸಮಯ ನೋಡಿಕೊಂಡು 1 ರಿಂದ 4 ನೇ ಆರೋಪಿತರಾದ ನೀವು ಮನೆಯ ಒಳಗಡೆ ಶಿಕ್ಷಾರ್ಹ ಅಪರಾದ ಎಸಗುವ ಸಮಾನ ಉದ್ದೇಶದಿಂದ ಅಕ್ರಮವಾಗಿ ಪ್ರವೇಶ ಮಾಡಿರುತ್ತೀರಿ ಎಂದು ಆ ಮೂಲಕ ಭಾರತ ದಂಡ ಸಂಹಿತೆ ಕಲಂ 454 ವಿಧಿಯನ್ವಯ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾದೊಳಗೆ ಮಾಡಿರುತ್ತೀರಿ.

ಕೊನೆಯದಾಗಿ ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವು ಅಪರಾಧ ಮಾಡುವ ಸಮಾನ ಉದ್ದೇಶದಿಂದ, ಚಾಸಾ-1 ರವರ ಮನೆಯ ಬೀರುವಿನ ಬೀಗವನ್ನು ಮುರಿದು ಬೀರಿನಲ್ಲಿ ಇದ್ದ ಸುಮಾರು 4,70,000/- ಬೆಲೆ ಬಾಳುವ 233.5 ಗ್ರಾಂ ಚಿನ್ನವನ್ನು ಕಳ್ಳತನ ಮಾಡಿರುತ್ತೀರಿ ಎಂದು ಆ ಮೂಲಕ ಭಾರತ ದಂಡ ಸಂಹಿತೆ ಕಲಂ 380 ವಿಧಿಯನ್ವಯ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾದೊಳಗೆ ಮಾಡಿರುತ್ತೀರಿ.

ಮೇಲಿನ ಆರೋಪಗಳಿಗೆ ಈ ನ್ಯಾಯಾಲಯದಲ್ಲಿ ವಿಚಾರಣೆಗೆ ಗುರಿಯಾಗುವಂತೆ ನಿಮಗೆ ನಿರ್ದೇಶಿಸಲಾಗಿದೆ.

(ಮೇಲಿನ ದೋಷಾರೋಪಣೆಯನ್ನು ಆರೋಪಿಗೆ ಓದಿ ತಿಳಿಸಿ ಹೇಳಿದ ನಂತರ ಆತ ಕೊಟ್ಟ ಉತ್ತರವನ್ನು ಯಥಾವತ್ತಾಗಿ ಬರೆದುಕೊಳ್ಳಲಾಗಿದೆ ಎಂದು ಈ ಮೂಲಕ ದೃಢೀಕರಿಸುತ್ತೇನೆ)

**ದಿನಾಂಕ: 25/11/2020** — ಪ್ರಧಾನ **ಸಿವಿಲ್ ನ್ಯಾಯಾಧೀಶರು ಮತ್ತು**
**ಸ್ಥಳ : ಹೊಸದುರ್ಗ** — **ಜೆ.ಎಂ.ಎಫ್.ಸಿ, ಹೊಸದುರ್ಗ.**